ಬಾರಕೂರು ಪ್ರಥಮ ದರ್ಜೆ ಕಾಲೇಜು.

176(67)

ಶ್ರೀ ಜಯಪ್ರಕಾಶ್ ಹೆಗಡೆ ಕೆ.(ಬ್ರಹ್ಮಾವರ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾರಕೂರು ಪ್ರಥಮ ದರ್ಜೆ ಕಾಲೇಜಿಗೆ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಮಂಜೂರಾದ ಬೋಧಕ ಸಿಬ್ಬಂದಿಯ ಸಂಖ್ಯೆ ಎಷ್ಟು? ಖಾಲಿ ಇರುವ ಸಿಬ್ಬಂದಿಯ ಸಂಖ್ಯೆ ಎಷ್ಟು? (ವಿವರ ನೀಡುವುದು)

ಆ) ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಖಾಲಿ ಇರುವ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಲಾಗುವುದೇ?

ಇ) ಸರ್ಕಾರಿ ಕಾಲೇಜುಗಳ ಕಟ್ಟಡಕ್ಕೆ ಹಣದಾನ ಕೊಟ್ಟವರ ಹೆಸರನ್ನು ಕಾಲೇಜಿಗೆ ಇಡುವ ಪದ್ಧತಿಯನ್ನು ಸರ್ಕಾರವು ಅನುಸರಿಸಿಕೊಂಡು ಬಂದಿದೆಯೇ, ಹಾಗಿದ್ದಲ್ಲಿ ನಿಗಧಿಪಡಿಸಿರುವ ಹಣದ ಮೊತ್ತವೆಷ್ಟು;

Dr. G.PARAMESHWARA (Minister of State for Higher Education, Science and Technology):

ಅ) ವಿಷಯ	ಮಂಜೂರಾದ ಹುದ್ದೆಗಳು	ಖಾಲಿ ಇರುವ ಹುದ್ದೆಗಳು
1. ವಾಣಿಜ್ಯ ಶಾಸ್ತ್ರ	1	-
2. ಆಂಗ್ಲಭಾಷೆ	1	1
3. ಕನ್ನಡ	1	-
4. ಇತಿಹಾಸ	1	-

ಆ) ಖಾಲಿ ಹುದ್ದೆಗಳಿಗೆ ಅರೆಕಾಲಿಕ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಕಾಲೇಜು ಪ್ರಾಂಶುಪಾಲರಿಗೆ ಅಧಿಕಾರ ನೀಡಲಾಗಿದೆ.

ಇ) ಹೌದು. ಕಾಲೇಜಿನ ಕಟ್ಟಡದ ಒಟ್ಟು ಅಂದಾಜಿನ 1:3ನೇ ಭಾಗ ಅಥವಾ ನಿವೇಶನ ದಾನವಾಗಿ ನೀಡಿದ್ದಲ್ಲಿ, ದಾನಿಗಳು ಇಚ್ಛಿಸಿದವರ ಹೆಸರನ್ನು ಕಟ್ಟಡಕ್ಕೆ

ನಾಮಕರಣ ಮಾಡಲಾಗುವುದು.

ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರ ಮತ್ತು ಸದಸ್ಯರ ನೇಮಕ.

177(68)

ಶ್ರೀ ಜಯಪ್ರಕಾಶ್ ಹೆಗಡೆ.ಕೆ.(ಬ್ರಹ್ಮಾವರ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರನ್ನಾಗಿ ವಿದ್ಯಾರ್ಥಿಗಳ ಪಾಲಕ : ರಕ್ಷಕರನ್ನು ನೇಮಕ ಮಾಡುವ ಉದ್ದೇಶ ಸರ್ಕಾರದ ಮುಂದಿದೆಯೇ;

ಆ) ಇದ್ದಲ್ಲಿ, ಆ ಕುರಿತು ಸಕಾಲಿಕ ಕ್ರಮಗಳನ್ನು ಜರುಗಿಸುವರೆ;

ಇ) ಪಾಲಕ : ರಕ್ಷಕರನ್ನು ಅಧ್ಯಕ್ಷ ಸದಸ್ಯರನ್ನಾಗಿ ಮಾಡುವುದರಿಂದ ಹೆಚ್ಚು ಉಪಯುಕ್ತತೆಯು ಉಂಟಾಗುತ್ತದೆ ಎಂಬುದನ್ನು ಪರಿಗಣಿಸಿ ಆ ಕುರಿತು ಕ್ರಮ ಜರುಗಿಸಲು ಸರ್ಕಾರದವರು ಮುಂದಾಗುವರೆ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಹೌದು

ಆ) ಈ ವಿಷಯವು ಪರಿಶೀಲನೆಯಲ್ಲಿದೆ.

ಇ) ಹೌದು.

ಬ್ರಹ್ಮಾವರ ವಿಧಾನಸಭಾ ಕ್ಷೇತ್ರದಲ್ಲಿನ ವಿಶ್ವಬ್ಯಾಂಕ್ ನೆರವಿನಡಿಯ ಕುಡಿಯುವ ನೀರಿನ ಯೋಜನೆ.

178(82)

ಶ್ರೀ ಜಯಪ್ರಕಾಶ್ ಹೆಗಡೆ ಕೆ.(ಬ್ರಹ್ಮಾವರ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದಲ್ಲಿನ ವಿಶ್ವಬ್ಯಾಂಕ್ ನೆರವಿನಡಿಯಲ್ಲಿ ಎಷ್ಟು